## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಲೋಕ್/ಬಿಸಿಡಿ/2811/2023/ಎಆರ್‌ಇ-7.

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560001,
ದೂ: 080-22257013 ಎಕ್ಸ್: 317
ಇಮೇಲ್: kla-are7-ka@karnataka.gov.in
ದಿನಾಂಕ: 18/12/2025.

**:: ಹಿಂಬರಹ ::**

ವಿಷಯ:- ಈ ಸಂಸ್ಥೆಯಲ್ಲಿ ದಾಖಲಾದ ದೂರಿನ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದೂರುದಾರರಾದ ಗಣೇಶ ಸಿಂಗ್ ಬಿ, ನಂ. 441, 4ನೇ ಮೇನ್ ರೋಡ್, 14ನೇ ಕ್ರಾಸ್ ರೋಡ್, ಶಾಸ್ತ್ರೀ ನಗರ, ಬೆಂಗಳೂರು ಇವರು ನಮ್ಮ ಸಂಸ್ಥೆಗೆ ಸಲ್ಲಿಸಿದ್ದ ಮೇಲ್ಕಂಡ ದೂರನ್ನು ಪರಿಶೀಲಿಸಲಾಯಿತು ಹಾಗೂ ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ ಸದರಿ ದೂರನ್ನು ಮುಕ್ತಾಯಗೊಳಿಸಲಾಗಿದೆ. ಗೌರವಾನ್ವಿತ ಲೋಕಾಯುಕ್ತರವರ **ಆದೇಶದ ಪ್ರತಿಯನ್ನು** ಈ ಪತ್ರದೊಂದಿಗೆ ಲಗತ್ತಿಸಿ, ನಿಮ್ಮ ಮಾಹಿತಿಗಾಗಿ ಕಳುಹಿಸಲಾಗಿದೆ.

18/12

ಅಪರ ನಿಬಂಧಕರು ವಿಚಾರಣೆಗಳು-7,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ರವರಿಗೆ,**

**R-1 :** Naresh Kumar, President,
Savitha Samaja Development Corporation,
Devaraja Urs Bhavana, No. 16/D, 4th Floor,
Millers Tank bund Area, Vasantha Nagara,
Bengaluru-560052. Mob: 9844026174.

ನಂ. ಕಂಪ್ಲೆಂಟ್/ಲೋಕ್/ಬಿಸಿಡಿ/2811/2023

ಎ.ಆರ್.ಇ-7
26/11/2025

: ಮುಂದುವರೆದ ಪರಿಶೀಲನಾ ಟಿಪ್ಪಣಿ :

58) ದೂರುದಾರರು ತಮ್ಮ ದೂರಿನಲ್ಲಿ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಾಂತರ ರೂಪಾಯಿ ಅಕ್ರಮಗಳು ನಡೆದಿರುವ ಬಗ್ಗೆ ಆಪಾದಿಸಿರುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ 2020-21, 2021-22 ಮತ್ತು 2022-23ರ ಸಾಲುಗಳಲ್ಲಿ ಸರ್ಕಾರ 12 ಕೋಟಿ ರೂಗಳಿಗೂ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಆರ್ಥಿಕವಾಗಿ ಹಿಂದುಳಿದಿರುವ ಸವಿತಾ ಸಮಾಜದ ಕುಟುಂಬಗಳಿಗೆ/ವ್ಯಕ್ತಿಗಳಿಗೆ, ಇಲಾಖೆಯ ಯೋಜನೆಗಳಿಗೆ ಸಹಾಯ ಧನವನ್ನು ನೀಡುವ ಕಾರ್ಯಗಳಲ್ಲಿ ಸುಮಾರು ರೂ. 5 ಕೋಟಿಗೂ ಹೆಚ್ಚು ಅಕ್ರಮ ನಡೆದಿರುತ್ತದೆ. ಸದರಿ ನಿಗಮದ ಅಧ್ಯಕ್ಷರಾದ 1ನೇ ಎದುರುದಾರರು ಮತ್ತು ಅವರ ಅವಧಿಯಲ್ಲಿ ಮತ್ತು 2ನೇ ಎದುರುದಾರರು ಸವಿತಾ ಸಮಾಜದ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಹೆಸರಿನಲ್ಲಿ ಮತ್ತು ವ್ಯಕ್ತಿಗತ ಸಹಾಯ ಧನಗಳ ವಿತರಣೆಯ ಹೆಸರಿನಲ್ಲಿ ಅಕ್ರಮಗಳನ್ನು ಎಸಗಿರುತ್ತಾರೆ ಮತ್ತು ನಕಲಿ ದಾಖಲೆಗಳನ್ನು ತಯಾರಿಸಿ ಬಿಡುಗಡೆಯಾದ ಅನುದಾನದ ಪೈಕಿ ಶೇಕಡ 50 ರಷ್ಟು ಹೆಚ್ಚು ಹಣವನ್ನು ವಂಚಿಸಿರುತ್ತಾರೆ. ಆ ಕಾರಣ, 1ನೇ ಎದುರುದಾರರು ಮತ್ತು 2ನೇ ಎದುರುದಾರರು ಹಾಗೂ

3, 4ನೇ ಎದುರುದಾರರು ಭ್ರಷ್ಟಾಚಾರ, ವಂಚನೆ ಮಾಡಿ ನಕಲಿ ದಾಖಲೆಯನ್ನು ತಯಾರಿಸಿ ಮತ್ತು ಅಧಿಕಾರ ದುರುಪಯೋಗಪಡಿಸಿಕೊಂಡಿದ್ದರಿಂದ ಸದರಿಯವರ ಮೇಲೆ ಸೂಕ್ತ ಕ್ರಮ ಜರುಗಿಸಲು ಕೋರಿರುತ್ತಾರೆ.

59)ದೂರುದಾರರ ದೂರು ಮತ್ತು ಲಗತ್ತಿಸಿದ ದಾಖಲೆಗಳನ್ನು 1 ಮತ್ತು 2ನೇ ಎದುರುದಾರರಿಗೆ ಕಳುಹಿಸಿ ಸದರಿಯವರಿಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. 1 ಮತ್ತು 2ನೇ ಎದುರುದಾರರು ತಮ್ಮ ವರದಿಯನ್ನು ಸಲ್ಲಿಸಿದ್ದು ತಮ್ಮ ವರದಿಯಲ್ಲಿ 2021–22ನೇ ಸಾಲಿನಲ್ಲಿ ಸರ್ಕಾರದಿಂದ ಒದಗಿಸಲಾದ 5 ಕೋಟಿಗಳ ಅನುದಾನದಲ್ಲಿ 2021–22ನೇ ಸಾಲಿನಲ್ಲಿ ಸ್ವಯಂಉದ್ಯೋಗ ಸಾಲ ಯೋಜನೆ ಹಾಗೂ ಸಾಂಪ್ರದಾಯಿತಿ ವೃತ್ತಿದಾರರ ಸಾಲ ಯೋಜನೆಗಳಿಗೆ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ನಿಯಮಾನುಸಾರ ಪರಿಶೀಲಿಸಿಕೊಂಡು ಮಂಡಳಿಯು ರೂ.3.35 ಕೋಟಿಗಳನ್ನು 670 ಅರ್ಹ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ರೂಪದಲ್ಲಿ ಡಿ.ಬಿ.ಟಿ. ಮೂಲಕ ಒದಗಿಸಲಾಗಿರುತ್ತದೆ ಹಾಗೂ 147 ಫಲಾನುಭವಿಗಳಿಗೆ ಡಿ.ಬಿ.ಟಿ. ಸಿದ್ಧವಾಗಿದ್ದು ನಿಯಮಾನುಸಾರ ಸೂಕ್ತ ದಾಖಲೆಗಳನ್ನು ಒದಗಿಸದೇ ಇದ್ದುದರ ಹಿನ್ನೆಲೆಯಲ್ಲಿ ಹಣ ಬಿಡುಗಡೆ ಮಾಡಿರುವುದಿಲ್ಲ. ಸರ್ಕಾರದಿಂದ ಹೆಚ್ಚುವರಿಯಾಗಿ 5 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿದ ನಿಯಮಾನುಸಾರ ಪರಿಶೀಲಿಸಿಕೊಂಡು ಮಂಡಳಿಯು

ರೂ.1595/- ಸಾಲ ಮತ್ತು ಸಹಾಯಧನ ನೀಡಲು ಕ್ರಿಯಾಯೋಜನೆ ರೂಪಿಸಲಾಗಿರುತ್ತದೆ.

60) 1 ಮತ್ತು 2ನೇ ಎದುರುದಾರರು ಮುಂದುವರೆದು ತಮ್ಮ ಆಕ್ಷೇಪಣೆಯಲ್ಲಿ ಈಗಾಗಲೇ 653 ಅರ್ಹ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ರೂಪದಲ್ಲಿ ಡಿ.ಬಿ.ಟಿ. ಮೂಲಕ ಒದಗಿಸಲಾಗಿರುತ್ತದೆ. 942 ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನವನ್ನು ಒದಗಿಸುವ ಪೂರ್ವದಲ್ಲಿಯೇ ಚುನಾವಣೆ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಬಾಕಿ ಇರುತ್ತದೆ ಹಾಗೂ ರೂ.1 ಕೋಟಿಯನ್ನು ಆಡಳಿತಾತ್ಮಕ ವೆಚ್ಚಕ್ಕಾಗಿ ಮೀಸಲಾಗಿರುತ್ತದೆ. ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ಆಯ್ಕೆ ನಡೆಯುತ್ತದೆ. ಆದ್ದರಿಂದ ಅಕ್ರಮದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಲ್ಲ ತೀರ್ಮಾನಗಳನ್ನು ನಿಗಮದ ನಿರ್ದೇಶಕ ಮಂಡಳಿಯಲ್ಲಿ ಒಪ್ಪಿಗೆ ಪಡೆದ ನಂತರದಲ್ಲಿ ನಿಯಮದ ವ್ಯವಸ್ಥಾಪಕ ನಿರ್ದೇಶಕರು ನೀಡುತ್ತಾರೆ. ದೂರುದಾರರು ಮಾಡಿದ ಆರೋಪವು ದುರುದ್ದೇಶಪೂರಿತ ಹಾಗೂ ರಾಜಕೀಯ ಪ್ರೇರಿತವಾಗಿರುತ್ತದೆ ಎಂದು ಹೇಳಿರುತ್ತಾರೆ.

61) 1 ಮತ್ತು 2ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಹಾಗೂ ದಾಖಲಾತಿಗಳನ್ನು ದೂರುದಾರರಿಗೆ ಕಳುಹಿಸಿ ಪ್ರತ್ಯುತ್ತರ ಸಲ್ಲಿಸಲು ಸೂಚಿಸಲಾಗಿತ್ತು. ದೂರುದಾರರು ಪ್ರತ್ಯುತ್ತರ ಸಲ್ಲಿಸಿದ್ದು, ಅದರಲ್ಲಿ 2020-

21, 2021-22, 2022-23ರ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಶ್ರೀ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಒಟ್ಟು 12 ಕೋಟಿ ರೂಪಾಯಿಗಳಿಗೂ ಹೆಚ್ಚು ಅನುದಾನವನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುತ್ತಾರೆ. ಆರ್ಥಿಕವಾಗಿ ಹಿಂದುಳಿದಿರುವ ಸವಿತಾ ಸಮಾಜದ ಕುಟುಂಬಗಳಿಗೆ ಸಹಾಯಧನವನ್ನು ನೀಡುವ ಕಾರ್ಯದಲ್ಲಿ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಹೆಸರಿನಲ್ಲಿ ಸುಮಾರು 5 ಕೋಟಿ ರೂಪಾಯಿಗಳಿಗೂ ಹೆಚ್ಚು ಅಕ್ರಮ ನಡೆದಿರುತ್ತದೆ. ಫಲಾನುಭವಿಗಳಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ತಯಾರಿಸಿ ಶೇ.50% ಕ್ಕೂ ಹೆಚ್ಚು ಅನುದಾನವನ್ನು ವಂಚಿಸಿರುವುದು ಕಂಡು ಬರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸವಿತಾ ಸಮಾಜ ನಿಗಮದ ವತಿಯಿಂದ 2020-21, 2021-22, 2022-23ರ ಸಾಲಿನಲ್ಲಿ ವ್ಯಕ್ತಿಗತ ಸಹಾಯಧನವನ್ನು ಪಡೆದಿರುವ ಫಲಾನುಭವಿಗಳ ಸತ್ಯಾಸತ್ಯತೆಯನ್ನು ಖುದ್ದಾಗಿ ಪರಿಶೀಲಿಸಿದಾಗ ಹಾಗೂ ಕಲ್ಯಾಣ ಕರ್ನಾಟಕದ ಹೆಸರಿನಲ್ಲಿ ನಡೆದಿರುವ ದಾಖಲೆಗಳನ್ನು ಖುದ್ದಾಗಿ ಪರಿಶೀಲಿಸಿದಾಗ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದಲ್ಲಿ ನಡೆದದಿರುವ ಅಕ್ರಮಗಳು ಗಮನಕ್ಕೆ ಬರುತ್ತವೆ ಎಂದು ಹೇಳಿರುತ್ತಾರೆ.

62) ದೂರುದಾರು ಪ್ರತ್ಯುತ್ತರ ಸಲ್ಲಿಸಿದ ನಂತರ ಅದರಲ್ಲಿ ಸಹಾಯಧನ ನೀಡುವ ಕಾರ್ಯದಲ್ಲಿ ಮತ್ತು ಇಲಾಖೆ ಕಲ್ಯಾಣ ಕಾರ್ಯಕ್ರಮ ಯಶಸ್ವಿಗೊಳಿಸಿವ ಕಾರ್ಯದಲ್ಲಿ ಸುಮಾರು 5 ಕೋಟಿಗೂ

ಹೆಚ್ಚು ಅಕ್ರಮ ನಡೆದಿರುತ್ತದೆ ಎಂದು ಆಪಾದಿಸಿದ್ದು, ಮುಂದುವರೆದು ಸದರಿ ಅವಧಿಯಲ್ಲಿಯ ವ್ಯಕ್ತಿಗತ ಸಹಾಯಧನವನ್ನು ಪಡೆದಿರುವ ಫಲಾನುಭವಿಗಳ ಸತ್ಯಾಸತ್ಯತೆಯನ್ನು ಖುದ್ದಾಗಿ ಪರಿಶೀಲಿಸಲು ಕೋರಿದ ಕಾರಣ ಗೌರವಾನ್ವಿತರ ಖಂಡಿಕೆ **23**ರ ಅನುಮೋದನೆಯೊಂದಿಗೆ ಪ್ರಕರಣದ ತನಿಖೆಯನ್ನು ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಕಳುಹಿಸಿ ತನಿಖೆ ಮಾಡಿ ತನಿಖಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

63) ಎಸ್.ಬಿ.ಲೋಕೇಶ್, ಲೆಕ್ಕಾಧೀಕ್ಷಕರು-1, ಕ.ಲೋ. ತಾಂತ್ರಿಕ ಮತ್ತು ಲೆಕ್ಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ತನಿಖಾ ವರದಿಯನ್ನು ಸಲ್ಲಿಸಿದ್ದು, ತನಿಖಾ ವರದಿಯಲ್ಲಿ ವ್ಯಕ್ತಿಗತ ಸಹಾಯಧನವನ್ನು ಪಡೆದಿರುವ ಫಲಾನುಭವಿಗಳನ್ನು ಖುದ್ದಾಗಿ ಭೇಟಿ ಮಾಡಿ ಸತ್ಯಾಸತ್ಯತೆಯನ್ನು ಪರಿಶೀಲಿಸಲು ದೂರುದಾರರ ಮೊಬೈಲ್ ಸಂ.9035380716 ಗೆ ಕರೆ ಮಾಡಿದಾಗ ಅವರ ಮೊಬೈಲ್ ಸಂಖ್ಯೆ ಇನ್‌ಕಮಿಂಗ್ ಕರೆಗಳ ಸೌಲಭ್ಯ ತಾತ್ಕಾಲಿಕವಾಗಿ ಲಭ್ಯವಿರುವುದಿಲ್ಲ ಎಂದು ಉತ್ತರ ಬಂದಿರುತ್ತದೆ. ದಿ: 11/11/2024 ರಿಂದ 15/11/2024 ರವರೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಜಿಲ್ಲೆಗಳನ್ನು ಆಯ್ದುಕೊಂಡು ದೂರುದಾರರಿಗೆ ಮತ್ತು ಎದುರುದಾರರಿಗೆ ಹಾಜರಾತಿ ನೋಟಿಸ್‌ಗಳನ್ನು ನೀಡಿ ತನಿಖಾ ಸಮಯದಲ್ಲಿ ಹಾಜರಿರಲು ಸೂಚಿಸಲಾಗಿದೆ. ದೂರುದಾರರು ತನಿಖಾ ದಿನಾಂಕ: 11/11/2024 ರಿಂದ 15/11/2024 ರವರೆಗೆ ತನಿಖಾ

ಸಮಯದಲ್ಲಿ ಹಾಜರಿರುವುದಿಲ್ಲ ಹಾಗೂ ಅವರ ಮೊಬೈಲ್ ನಂಬರಿಗೆ ಕರೆ ಮಾಡಿದಾಗ ಇನ್‌ಕಮಿಂಗ್ ಕಾಲ್‌ಗಳ ಸೌಲಭ್ಯ ತಾತ್ಕಾಲಿಕವಾಗಿ ಲಭ್ಯವಿರುವುದಿಲ್ಲವೆಂದು ಧ್ವನಿ ಸಂದೇಶ ಬಂದಿರುತ್ತದೆ.

64) ಲೆಕ್ಕಾಧೀಕ್ಷಕರು, ಕಲೋ, ತಾಂತ್ರಿಕ ಮತ್ತು ಲೆಕ್ಕ ವಿಭಾಗ, ಬೆಂಗಳೂರು ಇವರು ಮುಂದುವರೆದು ತಮ್ಮ ವರದಿಯಲ್ಲಿ 12 ಕೋಟಿಗೆ ಸಂಬಂಧಿಸಿದ ಲೆಕ್ಕದ ವಿವರ ಹಾಗೂ ಇತರ ದಾಖಲಾತಿಗಳನ್ನು 16/11/2024 ರಂದು ತಾಂತ್ರಿಕ ಮತ್ತು ಲೆಕ್ಕ ಶಾಖೆಯಲ್ಲಿ ಒದಗಿಸಲು ಸೂಚಿಸಲಾಯಿತು. ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದಿಂದ ಸಾಲ ಪಡೆದ ಫಲಾನುಭವಿಗಳನ್ನು ಭೇಟಿ ಮಾಡಲು ವ್ಯವಸ್ಥಾಪಕರು, ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ರಾಜಾಜಿನಗರ, 5ನೇ ಬ್ಲಾಕ್, ಬೆಂಗಳೂರು ಇಲ್ಲಿಗೆ ತೆರಳಿ ರ್‍ಯಾಂಡಮ್ ಆಗಿ ಆಯ್ಕೆ ಮಾಡಿ ಫಲಾನುಭವಿಗಳನ್ನು ಕೆಲವರ ಮೊಬೈಲ್ ನಂಬರ್ ನೋಡಿ ಮಹಜರ್ ಮಾಡಲಾಯಿತು. ಆ ಸಂದರ್ಭದಲ್ಲಿ 2 ಮತ್ತು 3ನೇ ಎದುರುದಾರರ ಹೇಳಿಕೆಗಳನ್ನು ಪಡೆದಿದ್ದು, ಛಾಯಾಚಿತ್ರಗಳನ್ನು ಸಹ ತೆಗೆಯಲಾಗಿದೆ. ಈ ಬಗ್ಗೆ ಅನುಬಂಧ 2 ರಿಂದ 5 ಹಾಜರುಪಡಿಸಲಾಗಿದೆ.

65) ಲೆಕ್ಕಾಧೀಕ್ಷಕರು-I, ಕಲೋ, ತಾಂತ್ರಿಕ ಮತ್ತು ಲೆಕ್ಕ ವಿಭಾಗ, ಬೆಂಗಳೂರು ರವರು ತಮ್ಮ ತನಿಖಾ ವರದಿಯಲ್ಲಿ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ 2020-21 ರಿಂದ 2022-23 ರವರೆಗೆ ಮಂಜೂರಾದ ವ್ಯಕ್ತಿಗತ ಸಹಾಯಧನಗಳ ವಿವರಗಳು

ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಮತ್ತು ಅವರ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಇತರೆ 7 ರಿಂದ 10 ಅಧಿಕಾರಿಗಳನ್ನು ಒಳಗೊಂಡ ಜಿಲ್ಲಾಮಟ್ಟದ ಆಯ್ಕೆ ಸಮಿತಿಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆ ಮಾಡಿದ ಪಟ್ಟಿಯನ್ನು ವ್ಯವಸ್ಥಾಪಕ ನಿರ್ದೇಶಕರು, ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು ಇಲ್ಲಿಗೆ ಕಳುಹಿಸಿ ಕೊಡಲಾಗುವುದು. ಸದರಿಯವರು ಆಡಳಿತಾತ್ಮಕ ಮಂಜೂರಾತಿ ನೀಡಿ 2020-21 ರಲ್ಲಿ ಆರ್.ಟಿ.ಜಿ.ಎಸ್. ಮುಖಾಂತರ ಜಮೆ ಮಾಡಿದ್ದು, 2021-22 ಮತ್ತು 2022-23 ರಿಂದ e-governance, DBT (Direct Beneficiary Transfer) ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿದೆ. ಈ ಬಗ್ಗೆ ಅನುಬಂಧ-6ರಲ್ಲಿ ತೋರಿಸಲಾಗುತ್ತಿದೆ.

**66)** ಫಲಾನುಭವಿಗಳ ಪಟ್ಟಿಯಲ್ಲಿ 21 ಫಲಾನುಭವಿಗಳನ್ನು ದಿ: 12/11/2024 ರಿಂದ 15/11/2024 ರವರೆಗೆ ಖುದ್ದಾಗಿ/ಮೊಬೈಲ್ ಮುಖಾಂತರ ಭೇಟಿ ಮಾಡಿದ್ದು, ಅವರಲ್ಲಿ 14 ಜನ ಫಲಾನುಭವಿಗಳನ್ನು ಸಲೂನ್/ಬ್ಯೂಟಿ ಪಾರ್ಲರ್ ನಲ್ಲಿ ಭೇಟಿಯಾಗಿದ್ದು, ಅವರು ಸಾಲದ ಮೊತ್ತ 40,000/- ಮತ್ತು ಸಹಾಯಧನದ ಮೊತ್ತ ರೂ.10,000/- ಒಟ್ಟು ರೂ.50,000/- ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಆಗಿರುತ್ತದೆಂದು ಮೌಖಿಕ ಹೇಳಿಕೆ ನೀಡಿರುತ್ತಾರೆ ಮತ್ತು ಮಹಜರ್‌ಗಳಿಗೆ ಸಹಿ

ಮಾಡಿರುತ್ತಾರೆ. ಉಳಿದ 7 ಜನರಲ್ಲಿ ಅವರು ಹಾಜರಿರದ ಕಾರಣ ಮೊಬೈಲ್ ನಂಬರಿಗೆ ಕರೆ ಮಾಡಲಾಗಿ ಅವರಿಗೆ ಮಂಜೂರಾದ ಸಾಲದ ಮೊತ್ತ ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಆಗಿರುವುದಾಗಿ ತಿಳಿಸಿರುತ್ತಾರೆ.

67) ದೂರುದಾರರು ಕರ್ನಾಟಕ ಸವಿತಾ ಸಮಾಜಕ್ಕೆ ಸಂಬಂಧಿಸಿದಂತೆ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಹೆಸರಿನಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಮಾಡಿದ ಆರೋಪದ ಬಗ್ಗೆ ಪರಿಶೀಲಿಸಲಾಗಿ ಸವಿತಾ ಸಮಾಜದಲ್ಲಿ ಕಲ್ಯಾಣ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಿರುವುದರಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಣ ದುರುಪಯೋಗವಾಗಿರುವುದು ಕಂಡು ಬಂದಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ದೂರುದಾರರು ಎದುರುದಾರರ ವಿರುದ್ಧ ಮಾಡಿದ ಆಪಾದನೆಯು ಸಾಬೀತಾಗಿರುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

68) ಎಸ್.ಬಿ.ಲೋಕೇಶ್, ಲೆಕ್ಕಾಧೀಕ್ಷಕರು-I, ಕ.ಲೋ. ತಾಂತ್ರಿಕ ಮತ್ತು ಲೆಕ್ಕ ವಿಭಾಗ, ಬೆಂಗಳೂರು ಇವರು ಸಲ್ಲಿಸಿದ ತನಿಖಾ ವರದಿಯನ್ನು ದೂರುದಾರರಿಗೆ ಕಳುಹಿಸಿ ಪ್ರತ್ಯುತ್ತರ ಸಲ್ಲಿಸಲು ಸೂಚಿಸಲಾಯಿತು. ದೂರುದಾರರು ಪ್ರತ್ಯುತ್ತರ ಸಲ್ಲಿಸಿದ್ದು, ಅದರಲ್ಲಿ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಾಂತರ ರೂಪಾಯಿ ಅಕ್ರಮ ನಡೆದಿರುವ ಸಂಬಂಧ ಸಂಪೂರ್ಣ ದಾಖಲೆಗಳ ಸಮೇತ ಮಾನ್ಯ ಲೋಕಾಯುಕ್ತರಿಗೆ ದೂರನ್ನು ಸಲ್ಲಿಸಲಾಗಿತ್ತು. 2020-21, 2021-22 ಮತ್ತು 2022-23 ರ ಸಾಲಿನಲ್ಲಿ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ 12 ಕೋಟಿಗಳಿಗಿಂತಲೂ ಹೆಚ್ಚು ಅನುದಾನ

ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. ನಿಗಮದ ಅಧೀನದಲ್ಲಿರುವ ಕರ್ನಾಟಕ ಸವಿತಾ ಸಮಾಜದ ಅಧ್ಯಕ್ಷರಾಗಿ ಶ್ರೀ ಮಹೇಶ್ ಕುಮಾರ್ ರವರು ಕಾರ್ಯ ನಿರ್ವಹಿಸಿರುತ್ತಾರೆ. ಅವರ ಜೊತೆ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ರವಿಯವರು ಸವಿತಾ ಸಮಾಜದ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಹೆಸರಿನಲ್ಲಿ ಮತ್ತು ವ್ಯಕ್ತಿಗತ ಸಹಾಯಧನ ವಿತರಣೆ ಸಮಯದಲ್ಲಿ ಅನುದಾನಗಳ ದುರ್ಬಳಕೆಯನ್ನು ಮಾಡಿರುತ್ತಾರೆ. ಸಾರ್ವಜನಿಕರ ಹಣವನ್ನು ದುರ್ಬಳಕೆ ಮಾಡಿರುವ ಸಂಬಂಧ ದೂರನ್ನು ಸಲ್ಲಿಸಲಾಗಿತ್ತು. ಆದ್ದರಿಂದ ಎದುರುದಾರರ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕೆಂದು ಕೋರಿಕೊಂಡಿರುತ್ತಾರೆ.

69) ದೂರುದಾರರ ದೂರು, 1 ಮತ್ತು 2ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆ, ದೂರುದಾರರು ಸದರಿ ಆಕ್ಷೇಪಣೆಗೆ ಸಲ್ಲಿಸಿದ ಪ್ರತ್ಯುತ್ತರ, ಎಸ್.ಬಿ.ಲೋಕೇಶ್, ಲೆಕ್ಕಾಧೀಕ್ಷಕರು-1, ಕ.ಲೋ. ತಾಂತ್ರಿಕ ಮತ್ತು ಲೆಕ್ಕ ವಿಭಾಗ, ಬೆಂಗಳೂರು ಇವರು ಸಲ್ಲಿಸಿದ ತನಿಖಾ ವರದಿ, ದೂರುದಾರರು ಸದರಿ ತನಿಖಾ ವರದಿಗೆ ಸಲ್ಲಿಸಿದ ಪ್ರತ್ಯುತ್ತರ, ಇವುಗಳ ಜೊತೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ದೂರುದಾರರ ದೂರಿಗೆ ಸಂಬಂಧಿಸಿದಂತೆ 1 ಮತ್ತು 2ನೇ ಎದುರುದಾರರು ಯಾವುದೇ ಫಲಾನುಭವಿಗಳ ಹಣದ ಬಿಡುಗಡೆಯಲ್ಲಿ ದುರ್ಬಳಕೆ ಆಗಿರುವುದಿಲ್ಲ. ದೂರುದಾರರು ಮಾಡಿದ ಆರೋಪ ದುರುದ್ದೇಶಪೂರಿತವಾಗಿರುತ್ತದೆ ಎಂದು ಹೇಳಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸುಮಾರು 5 ಕೋಟಿಗೂ ಹೆಚ್ಚು ಅಕ್ರಮ ನಡೆದಿರುತ್ತದೆ. ಫಲಾನುಭವಿಗಳ

ಸತ್ಯಾಸತ್ಯತೆಯನ್ನು ಖುದ್ದಾಗಿ ಪರಿಶೀಲಿಸಿದಾಗ ನಡೆದಿರುವ ಅಕ್ರಮಗಳು ಬಯಲಿಗೆ ಬರುತ್ತವೆ ಎಂದು ಹೇಳಿದ್ದರ ಕಾರಣ ತಾಂತ್ರಿಕ ವಿಭಾಗದಿಂದ ತನಿಖೆಯನ್ನು ಫಲಾನುಭವಿಗಳ ವ್ಯಕ್ತಿಗತವಾಗಿ ಖುದ್ದಾಗಿ ಪರಿಶೀಲಿಸಲು ಸೂಚಿಸಿದ್ದು ಎಸ್.ಬಿ.ಲೋಕೇಶ್, ಲೆಕ್ಕಾಧೀಕ್ಷಕರು-I, ಕ.ಲೋ. ತಾಂತ್ರಿಕ ಮತ್ತು ಲೆಕ್ಕ ವಿಭಾಗ, ಬೆಂಗಳೂರು ಇವರು ತನಿಖೆ ಮಾಡಿ ತನಿಖಾ ವರದಿಯನ್ನು ಸಲ್ಲಿಸಿದ್ದು, ತಮ್ಮ ವರದಿಯಲ್ಲಿ ಸುಮಾರು 21 ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಲ್ಲಿ 14 ಜನ ಫಲಾನುಭವಿಗಳ ಸಲೂನ್‌ಗಳು ಮತ್ತು ಬ್ಯೂಟಿ ಪಾರ್ಲರ್ ನಲ್ಲಿ ಭೇಟಿಯಾಗಿದ್ದು ಅವರು ತಮ್ಮ ಸಹಾಯಧನದ ಮೊತ್ತ ರೂ.50,000/- ತಮ್ಮ ಬ್ಯಾಂಕ್ ಖಾತೆಗೆ ಜಮೆ ಆಗಿರುತ್ತದೆ ಎಂದು ಹೇಳಿರುತ್ತಾರೆ. ಅಲ್ಲದೇ ಉಳಿದ 7 ಜನರಲ್ಲಿ ಅವರು ಸ್ಥಳದಲ್ಲಿ ಹಾಜರಿರದ ಕಾರಣ ಮೊಬೈಲ್ ಮೂಲಕ ಸಂಪರ್ಕಿಸಲಾಗಿ ಅವರೂ ಕೂಡ ಸಹಾಯಧನದ ರೂ.50,000/- ತಮ್ಮ ಬ್ಯಾಂಕ್ ಖಾತೆಗೆ ಜಮೆಯಾಗಿರುತ್ತದೆ ಎಂದು ಹೇಳಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯವರು ಮಹಜರನ್ನು ಮಾಡಿದ್ದು ಮಹಜರ್ ನಲ್ಲಿ ಅವರ ಸಹಿಯನ್ನು ಸಹಾ ಪಡೆದುಕೊಂಡಿರುತ್ತಾರೆ.

70) ಇನ್ನೊಂದು ಪ್ರಮುಖ ವಿಚಾರವೆಂದರೆ, ತನಿಖಾಧಿಕಾರಿಯವರು ದೂರುದಾರರಿಗೆ ದಿ: 11/11/2024 ರಿಂದ 15/11/2024 ರ ತನಿಖಾ ದಿನಗಳಂದು ಹಾಜರಿರಲು ನೋಟೀಸ್‌ಗಳನ್ನು ನೀಡಿದ್ದು, ನೋಟಿಸನ್ನು ಅನುಬಂಧ-1ರ ಪ್ರಕಾರ ಸ್ವೀಕರಿಸಿದರೂ ಸಹ ದೂರುದಾರರು ಹಾಜರಾಗಿರುವುದಿಲ್ಲ ಹಾಗೂ ಅವರ ಮೊಬೈಲ್‌ಗೆ ಕರೆ ಮಾಡಿದಾಗ ಅವರ ಮೊಬೈಲ್ ಇನ್‌ಕಮಿಂಗ್ ಕಾಲ್‌ಗಳ ಸೌಲಭ್ಯ

ತಾತ್ಕಾಲಿಕವಾಗಿ ಲಭ್ಯವಿರುವುದಿಲ್ಲವೆಂದು ಧ್ವನಿ ಸಂದೇಶ ಬಂದಿರುತ್ತದೆ ಎಂದು ಹೇಳಿರುತ್ತಾರೆ. ಇದನ್ನು ಪರಿಶೀಲಿಸಲಾಗಿ ದೂರುದಾರರು ತನಿಖೆಯ ಕಾಲಕ್ಕೆ ಹಾಜರಾಗದೇ ಸ್ಪಂದಿಸದೇ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಒಂದು ವೇಳೆ ದೂರುದಾರರು ಆಪಾದನೆ ಮಾಡಿದಂತೆ ಫಲಾನುಭವಿಗಳ ಅನುದಾನದ ಹಣದಲ್ಲಿ ದುರ್ಬಳಕೆ ಮಾಡಿದ್ದಲ್ಲಿ ದೂರುದಾರರು ತನಿಖಾಧಿಕಾರಿಯವರು ಕೊಟ್ಟ ನೋಟೀಸ್ ಹಾಗೂ ಮೊಬೈಲ್ ಕರೆಗೆ ಸ್ಪಂದಿಸಿ ತನಿಖೆಯ ಸಮಯದಲ್ಲಿ ಹಾಜರಾಗಿ ತಮ್ಮ ವಿಚಾರವನ್ನು ತಿಳಸಬಹುದಾಗಿತ್ತು. ಇದನ್ನು ಪರಿಶೀಲಿಸಲಾಗಿ ದೂರುದಾರರು ತಾವು ಮಾಡಿದ ಆಪಾದನೆಗೆ ಪುಷ್ಟೀಕರಿಸಲು ಯಾವುದೇ ದಾಖಲೆ ಇರದೇ ಇರುವ ಕಾರಣ ತನಿಖೆಗೆ ಉದ್ದೇಶಪೂರ್ವಕವಾಗಿ ಹಾಜರಾಗದೇ ಇರುವುದು ಕಂಡು ಬರುತ್ತದೆ. ತನಿಖಾಧಿಕಾರಿಯು ತಾವು ವರದಿಯಲ್ಲಿ ಹೇಳಿದ ವಿಷಯಗಳನ್ನು ಸ್ಪಷ್ಟೀಕರಿಸಲು ದೂರುದಾರರಿಗೆ ಹಾಜರಾಗಲು ನೋಟಿಸ್ ಸ್ವೀಕರಿಸಿದ ದಾಖಲೆ ಅನುಬಂಧ-1 ಹಾಗೂ ಫಲಾನುಭವಿಗಳನ್ನು ಸಂಪರ್ಕಿಸಿ ತನಿಖೆ ನಡೆಸಿ ಮಹಜರ್ ಮಾಡಿದ ಬಗ್ಗೆ ಹಾಗೂ ತನಿಖೆಯ ಸಂದರ್ಭದಲ್ಲಿ ಛಾಯಾಚಿತ್ರಗಳನ್ನು ತೆಗೆಸಿದ ಬಗ್ಗೆ ಅನುಬಂಧ-2 ರಿಂದ 5 ಹಾಗೂ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಆರ್.ಟಿ.ಜಿಎಸ್. ಮೂಲಕ ಹಾಗೂ ಡಿ.ಬಿ.ಟಿ. (Direct Beneficiary Transfer) ಮೂಲಕ ಅವರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿದ ಬಗ್ಗೆ ಅನುಬಂಧ-6 ಹಾಜರುಪಡಿಸಿರುತ್ತಾರೆ. ಅಲ್ಲದೇ ಕಲ್ಯಾಣ ಕಾರ್ಯಕ್ರಮಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ ಇವರು ಪಾವತಿಸಿದ ವಿವರದ

ಆಂತರಿಕ ಲೆಕ್ಕ ವರದಿಯನ್ನು ತೋರಿಸಲು ಅನುಬಂಧ-8ನ್ನು ಸಹ ಹಾಜರುಪಡಿಸಿರುತ್ತಾರೆ. ಅಲ್ಲದೇ ತಮ್ಮ ತನಿಖೆಯ ವರದಿಯಲ್ಲಿ **ದೂರುದಾರರು ಎದುರುದಾರರ ವಿರುದ್ಧ ಮಾಡಿದ ಆಪಾದನೆಯು ಸ್ಥಳ ತನಿಖೆ ಮತ್ತು ದಾಖಲೆಗಳ ಪರಿಶೀಲನೆಯಿಂದ ಸಾಬೀತಾಗಿಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ.** ದೂರುದಾರರಿಗೆ ತನಿಖಾ ವರದಿ ಹಾಗೂ ಲಗತ್ತಿಸಿದ ದಾಖಲೆಗಳನ್ನು ಕಳುಹಿಸಿ ಪ್ರತ್ಯುತ್ತರ ಸಲ್ಲಿಸಲು ಸೂಚಿಸಲಾಗಿ ದೂರುದಾರರು ಪ್ರತ್ಯುತ್ತರ ಸಲ್ಲಿಸಿದ್ದು ಪ್ರತ್ಯುತ್ತರದಲ್ಲಿ ತನಿಖಾ ವರದಿ ಹಾಗೂ ಅದರೊಂದಿಗೆ ಹಾಜರುಪಡಿಸಿದ ಅನುಬಂಧ-1 ರಿಂದ 8ರ ಬಗ್ಗೆ ಯಾವುದೇ ವಿಷಯವನ್ನು ಪ್ರಸ್ತಾಪ ಮಾಡದೇ ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಒಂದು ವೇಳೆ ದೂರುದಾರರು ಆಪಾದನೆ ಮಾಡಿದಂತೆ ಕರ್ನಾಟಕ ಸವಿತಾ ಸಮಾಜದ ಅಭಿವೃದ್ಧಿ ನಿಗಮದ ಫಲಾನುಭವಿಗಳ ಹಣದಲ್ಲಿ ದುರ್ಬಳಕೆ ಮಾಡಿಕೊಂಡಿದ್ದ ಪಕ್ಷದಲ್ಲಿ ದೂರುದಾರರು ಸೂಕ್ತವಾದ ದಾಖಲೆಗಳನ್ನು ಹಾಜರುಪಡಿಸಬಹುದಾಗಿತ್ತು. ಅಲ್ಲದೇ ತನಿಖೆಯ ಕಾಲದಲ್ಲಿ ತನಿಖಾಧಿಕಾರಿಯವರಿಗೆ ತಾವು ಮಾಡಿದ ಆಪಾದನೆಗೆ ಪುಷ್ಟೀಕರಿಸುವ ದಾಖಲೆಗಳನ್ನು ಹಾಜರುಪಡಿಸಿ ತನಿಖೆಗೆ ಸಹಕರಿಸಬಹುದಾಗಿತ್ತು. ಇದಲ್ಲದೇ ದೂರುದಾರರು ಆಪಾದನೆಯನ್ನು ಮಾಡಿದ್ದು ಬಿಟ್ಟರೆ ಯಾವೊಬ್ಬ ಫಲಾನುಭವಿಯೂ ಕೂಡ ಎದುರುದಾರರ ವಿರುದ್ಧ ಆಪಾದನೆ ಮಾಡಿರುವುದಿಲ್ಲ. ತನಿಖಾಧಿಕಾರಿಯವರು ಫಲಾನುಭವಿಗಳಿಗೆ ಖುದ್ದಾಗಿ ಅವರ ಸಲೂನ್/ಬ್ಯೂಟಿ ಪಾರ್ಲರ್‌ಗೆ ಭೇಟಿ ಮಾಡಿದಾಗ ಮತ್ತು ಕೆಲವರಿಗೆ ಫೋನ್ ಮೂಲಕ ಸಂಪರ್ಕಿಸಿದಾಗ ದೂರುದಾರರು ಮಾಡಿದ ಆಪಾದನೆ ನಿಜವಾಗಿದ್ದಲ್ಲಿ ಅವರು

ತನಿಖಾಧಿಕಾರಿಗಳಿಗೆ ಸದರಿ ವಿಷಯದ ಬಗ್ಗೆ ಹೇಳಬಹುದಾಗಿತ್ತು. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಪ್ರಸ್ತುತ ದೂರಿನಲ್ಲಿ ತನಿಖೆ ಮಾಡುವ ಯಾವುದೇ ಅಂಶಗಳು ಕಂಡು ಬರುತ್ತಿಲ್ಲ.

71) ಆದ್ದರಿಂದ, ಗೌರವಾನ್ವಿತರು ಒಪ್ಪಿದಲ್ಲಿ, ದೂರುದಾರರ ದೂರನ್ನು ಮುಕ್ತಾಯಗೊಳಿಸಬಹುದಾಗಿದೆ ಹಾಗೂ ಕಡತವನ್ನು 'ಸಿ' ವಿಲೇಯಲ್ಲಿರಿಸಿ ರೆಕಾರ್ಡ್ ಶಾಖೆಗೆ ಕಳುಹಿಸಬಹುದಾಗಿದೆ.

ಗೌರವಾನ್ವಿತರ ಆದೇಶಕ್ಕಾಗಿ ಕಡತವನ್ನು ಮಂಡಿಸಿದೆ.

25/11

(ಪೃಥ್ವಿರಾಜ್ ವರ್ಣೇಕರ್)

ಎ.ಆರ್.ಇ.7

72) ಗೌರವಾನ್ವಿತ ಲೋಕಾಯುಕ್ತರು)

This complaint is filed by one Sri.Ganesh Singh.B, alleging that there has been large scale misappropriation of funds in Karnataka Savitha Samaja Development Corporation. According to the complainant, nearly Rs.12 Crores were released for the year 2022-23, out of which an amount of Rs.5 Crores has been misused; allegations are made against the Respondents.

73. A report was called from Respondent No.1 and 2. In the report filed, they have denied the allegations. Therefore, the Technical and Audit Cell of the Karnataka Lokayukta was instructed to investigate the matter and submit a report. In the report submitted, the Accounts Officer of the Karnataka Lokayukta has conducted investigation by issuing notice to the concerned, including the complainant. He has enquired with the beneficiaries and has confirmed the fact that indeed the benefit was extended to each one of them; the 21 beneficiaries were contacted either personally or over phone and it has been confirmed that the benefits due and payable to them have been given to them by depositing the amount into their accounts. Therefore, the allegation of the complainant that in the name of beneficiaries, without extending the benefit to them, amount has been misused by the office bearers is not *prima facie* established.

74. Indeed, in the course of investigation the complainant was asked to be present to assist the investigation. He was also contacted through phone by the Investigating Officer but the complainant did not appear.

75. Later, after receiving the report from the Auditor/Investigating Officer, this authority furnished the copy of the report to the complainant calling upon him to file his rejoinder. The complainant has not touched the aspects mentioned in the report but has only made some general remarks denying the contents of the report.

76. In the above background, the Additional Registrar (Enquiries-7) of this institution has considered entire materials on record and has rightly proposed to close this case.

77. I have perused the records and the detailed Scrutiny Note put up by Additional Registrar (Enquiries-7) of this institution. I find that the

allegations made by the complainant have not been substantiated by producing any acceptable material. Therefore, accepting the Scrutiny Note, this complaint is closed.

LOKAYUKTA
05.12.2025